ವಾರದ ಮುಂಗಾರು

ಭಾನುವಾರ 5-3-1989

ಅನಾಥನಾಗಿ ಬೀದಿಗೆ ಬಿದ್ದಿದ್ದ ಬಾಲಕನೊಬ್ಬ ಬಣ್ಣದ ಬದುಕಿನ ಮಾಯಾಲೋಕದ ತುತ್ತತುದಿಯ ಮಹಡಿಯನ್ನೇರಲು ಪಟ್ಟಪಾಡೇ ಚಾರ್ಲಿಚಾಪ್ಲಿನ್ನನ ಜೀವನ. ಕಿಕ್ಕಿರಿದು ನೆರೆವ ಲಕ್ಷಾಂತರ ಪ್ರೇಕ್ಷಕರ ಉಕ್ಕಿಬರುವ ನಗುವಿನ ಹಿಂದೆ ತನ್ನ ದುರಂತ ಬದುಕನ್ನು ಅರಗಿಸಿಕೊಂಡ ಚಾಪ್ಲಿನ್ನನಿಗೆ ನಗುವೇ ಬದುಕಾಗಿತ್ತು. ಆದರೆ ಆದಕ್ಕಾಗಿ ಎಂದೂ ಆತ ತನ್ನ ಬದುಕನ್ನು ಮಾರಿಕೊಳ್ಳಲಿಲ್ಲ.

ಜಗತ್ತನ್ನೇ ನಕ್ಕು ನಗಿಸುವ ಜತೆ ಜತೆಗೇ ಚಿಂತನೆಗೆ ಹಚ್ಚಿದ ಅದ್ವಿತೀಯ ಹಾಸ್ಯಪಟು ಚಾರ್ಲಿ ಚಾಪ್ಲಿನ್ ಬದುಕಿದ್ದಿದ್ದರೆ ಏಪ್ರಿಲ್ 16ರಂದು ಆತನಿಗೆ ನೂರು ತುಂಬುತ್ತಿತ್ತು. ಜಾಗತಿಕ ರಂಗಭೂಮಿಗೆ ಮತ್ತು ಬೆಳ್ಳಿತೆರೆಗೆ ಹೊಸ ಆಯಾಮಕೊಟ್ಟ ಈ ನಗುಗಾರನ ನೆನಪು ಇಲ್ಲಿದೆ.

ದಿನೇಶ್ ಅಮಿನ್ ಮಟ್ಟು

ರಂಗಭೂಮಿಯ ಮೇಲೆ ಹಾಡುತ್ತಿದ್ದ ತಾಯಿಯ ಸುಮಧುರ ಕಂಠ ಹಠಾತ್ತನೇ ಕೀರಲಾಗ ತೊಡಗಿ ಆಕೆ ಕಿರುಚಾಡ ತೊಡಗಿದ್ದಳು. ತೆರೆಯ ಮರೆಯಲ್ಲಿ ನಿಂತು ಅದನ್ನು ಉಸಿರುಬಿಗಿಹಿಡಿದು ನೋಡುತ್ತಿದ್ದ ಆಕೆಯ ಐದು ವರ್ಷದ ಪುಟ್ಟ ಮಗ ಸಹಾಯಕ್ಕೆ ಧಾವಿಸುತ್ತಿದ್ದಂತೆ ಆಕೆ ಅತನ ತೋಳ್ತೆಕ್ಕೆಯಲ್ಲಿ ಕುಸಿದುಬಿದ್ದಳು.

ಆ ಬಾಲಕನ ಅನಾಥ ಬದುಕಿನ ಏಕೈಕ ಆಸರೆಯಾದ ತಾಯಿಯ ರಂಗಬದುಕು ಕೂಡಾ ಅವಸಾನಗೊಂಡಿತ್ತು. ಆತ ನಿಜಕ್ಕೂ ಅಳಬೇಕಿತ್ತು. ಆದರೆ...

ತೆರೆಎತ್ತಿದಾಗ ಕಂಡದ್ದು ಕಣ್ಣು ಕುಕ್ಕುವ ಫುಟ್ ಲೈಟ್‌ಗಳು, ದಟ್ಟಮಂಜಿನ ಆವರಣದೊಳಗೆ ಅಸ್ಪಷ್ಟವಾಗಿ ಕಾಣುತ್ತಿದ್ದ ಪ್ರೇಕ್ಷಕರ ತಲೆಯ ಸಾಲುಗಳು. ಕೇಕೆ...ಶಿಳ್ಳುಗಳು.

[illegible] ಕೊಳ್ಳಲು ಬಂದ ಅವರಿಗೆ ನಿಜಬದುಕಿನ ಗೋಳು ಬೇಕಿರಲಿಲ್ಲ. ಬಣ್ಣದ ಬದುಕಿನ ಮಾಯಾ ಲೋಕದಲ್ಲಿ ನಟ-ನಟಿಯರ ನಿಜ ಬದುಕಿನ ಕಣ್ಣೀರಿಗೆ ಬೆಲೆ ಇಲ್ಲ ಎಂಬ ಸತ್ಯ ಅರಿವಾಗುತ್ತಿದ್ದಂತೆ ಆ ಪುಟ್ಟ ಬಾಲಕ ಪಳ್ಳನೇ ನಕ್ಕ. ನಗುವಿನ ಹಿಂದಿನ ವ್ಯಂಗ್ಯ ಕಾಣದ ಪ್ರೇಕ್ಷಕರೂ ಗೊಳ್ಳೆಂದು ನಕ್ಕರು. ಅವರಿಗೆ ಬಾಲಕನ ಕಣ್ಣುಗಳಲ್ಲಿ ತುಂಬಿಕೊಂಡ ಕಣ್ಣೀರು ಕಂಡಿರಲಿಲ್ಲ. ಬಾಲಕನಿಗೆ ಯೋಚಿಸುವುದಕ್ಕೂ ಅವಕಾಶವಿರಲಿಲ್ಲ. ಅವನಿಗೆ ಬದುಕಿನ ರಹಸ್ಯ ಗೊತ್ತಾಗಿತ್ತು.

ಆತ ಹಾಡ ತೊಡಗಿದ್ದ. ಕುಸಿದುಬಿದ್ದ ತಾಯಿಯನ್ನು ತಬ್ಬಿಕೊಂಡೇ [illegible] ಆ ತಬ್ಬಲಿ ಬಾಲಕ ತನ್ನ ಬದುಕಿನ ಮೊದಲ ಹಾಡು ಹಾಡತೊಡಗಿದ್ದ.

ತಲೆತೂಗಿದ ಪ್ರೇಕ್ಷಕರು ಹುಚ್ಚೆದ್ದು ಕುಣಿದಾಡತೊಡಗಿದ್ದರು. ಹಾಡು ಮುಂದುವರಿದಂತೆ ಆ ಬಾಲಕನ ಮೇಲೆ ಹಣದ ಸುರಿಮಳೆಯಾಗತೊಡಗಿತ್ತು. ಹಣ ಕಂಡೊಡನೆ ಆತ ಥಟ್ಟನೇ ಹಾಡು ನಿಲ್ಲಿಸಿ ಪ್ರೇಕ್ಷಕರೊಡನೆ "ಮೊದಲು ಎಲ್ಲಾ ಹಣ ಹೆಕ್ಕುವೆ ಆ ನಂತರ ನಿಮಗಾಗಿ ಹಾಡುವೆ" ಅಂದ. ಜನ ಮತ್ತೊಮ್ಮೆ ನಕ್ಕರು.

ಹಾಡು ಮುಂದುವರಿದಂತೆ ಆ ಬಾಲಕ ಕಣ್ಣೀರೊರೆಸಿಕೊಂಡು ತಾಯಿ ಕೊನೆಯಲ್ಲಿ ಹಾಡಿದ ಹಾಗೆ ಕೀರಲು ಧ್ವನಿಯಲ್ಲಿ ಆಕೆಯನ್ನೇ ಗೇಲಿಮಾಡಿ ಅಣಕಿಸಿ ಹಾಡತೊಡಗಿದ್ದ. ಜನ ಹುಚ್ಚೆದ್ದಂತೆ ಚಪ್ಪಾಳೆ ಬಾರಿಸುತ್ತಿದ್ದರು.

ನಾಟಕ ಮುಗಿಯುತ್ತಿದ್ದಂತೆ ಸಭಾಂಗಣ ಖಾಲಿಯಾಗಿತ್ತು. ಉಳಿದವರು– ಆ ಬಾಲಕ ಮತ್ತು ಆತನ ರೋಗಿಷ್ಟ ತಾಯಿ. ಅಲ್ಲಿ ನಗು ಇರಲಿಲ್ಲ. ಕೇವಲ ಕಣ್ಣೀರಿತ್ತು. ಆ ಬಾಲಕನೇ ಚಾರ್ಲಿ ಚಾಪ್ಲಿನ್, ಹೆಸರು ಕೇಳಿದೊಡನೆ ದುಂಡಗಿನ ಹ್ಯಾಟು, ದೊಗಲೆ ಪ್ಯಾಂಟು. ಪಾದಕ್ಕಿಂತ ಉದ್ದವೆಯ ದೊಡ್ಡ ಬೂಟುಗಳನ್ನು ಧರಿಸಿ ಕೈಯಲ್ಲಿ ಬೆತ್ತ ತಿರುಗಿಸುತ್ತಿರುವ [illegible] ಮೀಸೆಯ ವ್ಯಕ್ತಿ ನಮ್ಮೆದುರು ಪ್ರತ್ಯಕ್ಷವಾಗುತ್ತಾನೆ. ಕ್ಷಣದಲ್ಲಿಯೇ [illegible]

'ಶೋಲ್ಡರ್ ಆರ್ಮ್ಸ್'ನಲ್ಲಿ

ಕಣ್ಣುಗಳಲ್ಲಿ ಇಬ್ಬನಿಯಾಗಿ ನಗು ಉಕ್ಕಿ ಬರುತ್ತದೆ.

ತನ್ನ ಬದುಕಿನುದ್ದಕ್ಕೂ ಜಗತ್ತನ್ನು ನಗಿಸಿದ ಇಂದಿಗೂ ತನ್ನ ಚಿತ್ರಗಳ ಮೂಲಕ ಆ ನಗುವನ್ನು ಜೀವಂತವಾಗಿಟ್ಟ ಚಾರ್ಲಿ ಚಾಪ್ಲಿನ್ ಈ ಲೋಕಕ್ಕೆ ಕಣ್ಣುಬಿಟ್ಟಾಗ ಆತನ ಸುತ್ತಲಿದ್ದುದು ಅಳುತ್ತಿದ್ದ ಜಗತ್ತು.

1889ರ ಏಪ್ರಿಲ್ 16ರಂದು ಲಂಡನ್‌ನ ವಾಲ್‌ವರ್ತ್‌ನಲ್ಲಿ ಹುಟ್ಟಿದ ಚಾರ್ಲಿ ಸ್ಪೆನ್ಸರ್ ಚಾಪ್ಲಿನ್‌ಗೆ ವರ್ಷ ತುಂಬುವಷ್ಟರಲ್ಲಿ ಕುಡುಕ ತಂದೆ ಹೆಂಡತಿಮಕ್ಕಳನ್ನು ಬೀದಿಗೆಸೆದು ಮದ್ಯದ ದಾಟಲಿ ಹಿಡಿದು ಓಡಿದ್ದ.

ರಂಗಭೂಮಿಯಲ್ಲಿ ಕಲಾವಿದೆಯಾಗಿದ್ದ ತಾಯಿ ಹನ್ನಾಹಿಲ್ ನಾಟಕ ತಂಡದಲ್ಲಿ ಹಾಡುತ್ತಾ ಮಕ್ಕಳೊಡನೆ ಊರೂರು ಸುತ್ತುತ್ತ ಮಕ್ಕಳನ್ನು ಸಾಕುತ್ತಿದ್ದಳು. ಚಾಪ್ಲಿನ್‌ನ ಐದರ ಹರೆಯದಲ್ಲಿಯೇ ತಾಯಿ ಕಂಠ ಕಳೆದುಕೊಂಡು ರಂಗಭೂಮಿಯಿಂದ ಬೀದಿಗೆಸೆಯಲ್ಪಟ್ಟಿದ್ದಳು.

ಆ ನಂತರದ ದಿನಗಳಲ್ಲಿ ತಾಯಿ ಮಕ್ಕಳದ್ದು ಬೀದಿ ಬದುಕು. ಈ ಅವಧಿಯಲ್ಲಿ ಚಾಪ್ಲಿನ್ ಹೊಟ್ಟೆಪಾಡಿಗಾಗಿ ಹಲವಾರು ವೇಷಧರಿಸಿದ್ದ.

ಮನೆ ಕೆಲಸದಾಳು, ಹೊಟೇಲ್‌ಮಾಣಿ, ಹಳೆ ಬಟ್ಟೆಗಳ ವ್ಯಾಪಾರಿ, ರಸ್ತೆ ಕೆಲಸದ ಕೂಲಿ, ಬಾಕ್ಸಿಂಗ್ ರೆಫ್ರಿ, ಬೀದಿ ಅಂಗಡಿಯ ಮಾಲಿಕ, ಚಿತ್ರಕಲಾವಿದ, ದಂತ ತಜ್ಞ, ದಾದಿ, ವಾಚ್‌ಮನ್ ಹೀಗೆ ತನ್ನ ಬಾಲ್ಯದಲ್ಲಿ ಚಾಪ್ಲಿನ್ ಮಾಡದ ಕೆಲಸಗಳಿರಲಿಲ್ಲ. ಅವನೊಳಗಿದ್ದ ಕಲಾವಿದ ಚಾಪ್ಲಿನನ್ನು ಯಾವ ಉದ್ಯೋಗದಲ್ಲಿಯೂ ಸಂತೃಪ್ತಿಯಿಂದ ಇರಲು ಬಿಡುತ್ತಿರಲಿಲ್ಲ. ಸಮಯ ಸಿಕ್ಕಾಗೆಲ್ಲ ಹಾಡುತ್ತಾ–ಕುಣಿಯುತ್ತಾ ಲಂಡನಿನ ರಾತಿ ಬೀದಿಯಲ್ಲಿ ಸೋದರ ಸಿಡ್ನಿ ಚಾಪ್ಲಿನ್‌ನೊಂದಿಗೆ ತಿರುಗುತ್ತಿದ್ದ. ಚಾಪ್ಲಿನ್ ತನ್ನ ಐದರ ಹರೆಯದಲ್ಲಿ ರೋಗಿಷ್ಟ ತಾಯಿಯನ್ನು ಸಾಕುವ ಭಾರ ಹೊತ್ತಿದ್ದ. ಬೀದಿ ಕುಣಿತದಲ್ಲಿ ಅಷ್ಟಿಷ್ಟು ಗಳಿಕೆ ಹೊಟ್ಟೆ ತುಂಬುವಷ್ಟು ಗಳಿಕೆಯಾಗುತ್ತಿತ್ತು.

ಅದೇ ವೇಳೆ ಬೀದಿ ಸುತ್ತುತ್ತಿದ್ದ ಚಾಪ್ಲಿನ್ ಸೋದರರನ್ನು ಪೊಲೀಸರು ಹಿಡಿದು ಅನಾಥಾಶ್ರಮಕ್ಕೆ ಸೇರಿಸಿದರು. ಅಲ್ಲಿಂದ ಹೊರ ಬಂದು ಸ್ವಲ್ಪ ಸಮಯ ತಾಯಿಯ ಜತೆ ಕಳೆಯುವಾಗಲೇ ತಾಯಿಗೆ ಹುಚ್ಚು ಹಿಡಿಯಿತು. ಆಕೆಯನ್ನು ಹುಚ್ಚರ ಆಸ್ಪತ್ರೆಗೆ ಸೇರಿಸಲಾಯಿತು. ಇವರನ್ನು ಮತ್ತೆ ಅನಾಥಾಶ್ರಮಕ್ಕೆ ಒಯ್ಯಲಾಯಿತು. ಅಲ್ಲಿನ ದುರವಸ್ಥೆ ಬಾಲಕ ಚಾಪ್ಲಿನ್ ಮೇಲೆ ಆಘಾತ ಉಂಟು ಮಾಡಿತ್ತು. ಅಲ್ಲಿಂದ ತಪ್ಪಿಸಿ ಓಡಿ ಬಂದ ಚಾಪ್ಲಿನ್ ತಲೆಮರೆಸಿಕೊಳ್ಳಲಿಕ್ಕಾಗಿಯೇ ಬೀದಿ ಬೀದಿ ಅಲೆಯುತ್ತಿದ್ದ. ನಟ/ನರ್ತಕನಾಗಲು ಕಂಡಕಂಡವರ ಕಾಲು ಹಿಡಿದು ಗೋಗರೆಯುತ್ತಿದ್ದ.

'ಗೋಲ್ಡ್ ರಶ್'ನ ಬೂಟು ತಿನ್ನುವ ದೃಶ್ಯ

1901ರಲ್ಲಿ ಹನ್ನೆರಡರ ಹರೆಯದ ಚಾಪ್ಲಿನ್ ಬಾಲ ನರ್ತಕರ ತಂಡ ಸೇರಿ ಮೊದಲ ಬಾರಿಗೆ ನಾಟಕದಲ್ಲಿ ಪಾತ್ರ ವಹಿಸಿದ. ಮುಂದಿನ ನಾಲ್ಕು ವರ್ಷಗಳ ಕಾಲ ಚಾಪ್ಲಿನ್ ಆ ತಂಡದೊಡನೆ ಲಂಡನ್ ಸುತ್ತಲೂ ಸಣ್ಣಪುಟ್ಟ ನಾಟಕದಲ್ಲಿ ಅಭಿನಯಿಸತೊಡಗಿದ. ಇದರಿಂದ ಆತನ ಬದುಕಿಗೆ ಭದ್ರತೆ ಬಂದಿದ್ದರೂ ಹಸಿವಿನಿಂದ ಒದ್ದಾಡಬೇಕಾದ ದಯನೀಯ ಸ್ಥಿತಿ ತಪ್ಪಿತು.

ಹದಿನೇಳರ ಹರೆಯದಲ್ಲಿ ಚಾಪ್ಲಿನ್ ಆಗಿನ ಖ್ಯಾತ ಫ್ರೆಡ್ ಕಾರ್ನೊ ನಾಟಕ ಕಂಪೆನಿಗೆ ಸೇರಿದ. ಆ ತಂಡದಲ್ಲಿ ಚಾಪ್ಲಿನ್ ಸೋದರ ಸಿಡ್ನಿ ಆಗಲೇ ಖ್ಯಾತ ಹಾಸ್ಯ ನಟನಾಗಿದ್ದ. ಇದು ಕಲಾವಿದ ಚಾಪ್ಲಿನ್‌ನ ಜೀವನದ ಮಹತ್ವದ ತಿರುವು. ಫ್ರೆಡ್ ಕಾರ್ನೊ ಕಂಪೆನಿಯೊಂದಿಗೆ ದೇಶ–ವಿದೇಶ ಸುತ್ತಿದ ಚಾಪ್ಲಿನ್ ನಿಧಾನವಾಗಿ ಕಲಾವಿದನಾಗಿ ರೂಪುಗೊಳ್ಳತೊಡಗಿದ್ದ.

ಅಮೆರಿಕ ಪ್ರವಾಸದ ವೇಳೆ "ಎ ನೈಟ್ ಇನ್ ಲಂಡನ್ ಮ್ಯೂಸಿಕ್ ಹಾಲ್" ನಾಟಕದಲ್ಲಿ ಚಾಪ್ಲಿನ್‌ನ ಕುಡುಕನ ಅಭಿನಯ ನೋಡಿದ ಅಲ್ಲಿನ ಖ್ಯಾತ ನಾಟಕ ಕಂಪೆನಿ ಮಾಲಿಕ ಮ್ಯಾಕ್ ಸೆನೆಟ್ ತನ್ನಲ್ಲಿಗೆ ಆಹ್ವಾನಿಸಿದ. ತಂಡದ ನಾಟಕಗಳಲ್ಲಿ ಜನಪ್ರಿಯನಾದ ಚಾಪ್ಲಿನ್ ಅಮೆರಿಕದಲ್ಲಿ ಬೇರು ಬಿಡತೊಡಗಿದ್ದ.

1913 ಡಿಸೆಂಬರ್‌ನಲ್ಲಿ ಚಾಪ್ಲಿನ್‌ನ ಮೊದಲ ಸಿನಿಮಾ ಬಿಡುಗಡೆ ಆಯಿತು. ಅದರಲ್ಲಿ ಚಾಪ್ಲಿನ್‌ನದು ನಯವಂಚಕ ಖಳ ಪಾತ್ರ. ಉದ್ದನೆ ಕೋಟು, ಫ್ರಾಕ್ ಕೋಟು, ಇಳಿಬಿಟ್ಟ ಮೀಸೆಯ ಚಾಪ್ಲಿನ್ ಪಾತ್ರ ಅಷ್ಟೇನೂ ಜನಪ್ರಿಯವಾಗಲಿಲ್ಲ. ಆತನ ಎರಡನೇ ಚಿತ್ರ "ಕಿಡ್ ಆಟೋ ರೇಸಸ್ ಎಟ್ ವೆನಿಸ್" ಈ ಚಿತ್ರದಲ್ಲಿ ಚಾಪ್ಲಿನ್ ತನ್ನ ಪ್ರಖ್ಯಾತ ವೇಷವಾದ ದುಂಡನೆ ಹ್ಯಾಟ್ ದೊಗಲೆ ಪ್ಯಾಂಟು, ದೊಡ್ಡ ಬೂಟು ಧರಿಸಿ ಕೈಯಲ್ಲಿ ಬೆತ್ತ ತಿರುಗಿಸುತ್ತ ತುಂಡು ಮೀಸೆ ಕುಣಿಸುತ್ತ ಕಾಣಿಸಿದ.

ಈ ಚಿತ್ರ ನಿರೀಕ್ಷೆ ಮೀರಿ ಯಶಸ್ಸು ಪಡೆದಿತ್ತು. ಆ ನಂತರ ಚಾಪ್ಲಿನ್ ಹಿಂದಿರುಗಿ ನೋಡಲಿಲ್ಲ. ತನ್ನ ಹನ್ನೆರಡನೇ ಚಿತ್ರವನ್ನು ತಾನೇ ಬರೆದು ಮೇಬೆಲ್ ನಾರ್ಮಂಡ್ ಜತೆ ನಿರ್ದೇಶಿಸಿದ. ಕೀಸ್ಟೋನ್ ಕಂಪೆನಿಯಲ್ಲಿದ್ದ 1 ವರ್ಷದ ಅವಧಿಯಲ್ಲಿ ಚಾಪ್ಲಿನ್ 35 ಚಿತ್ರಗಳಲ್ಲಿ ನಟಿಸಿದ್ದ. ಹೆಚ್ಚಿನ ಚಿತ್ರಗಳಿಗೆ ಆತನೇ ನಿರ್ದೇಶಕನಾಗಿದ್ದ.

ಅಭಿನಯದೊಂದಿಗೆ ಸಂಗೀತ, ಚಿತ್ರಕಥೆ ನಿರ್ದೇಶನ ಎಲ್ಲವನ್ನೂ ಅರೆದು ಕುಡಿದ ಚಾಪ್ಲಿನ್ ಆಗಲೇ ವಾರಕ್ಕೆ 1,250 ಡಾಲರ್ ಸಂಭಾವನೆ ಪಡೆಯುವ ದುಬಾರಿ ನಟ ಅನಿಸಿದ್ದ.

ಈ ವೇಳೆಯಲ್ಲಿಯೇ ಅಂದರೆ 1915 ರಲ್ಲಿ ಚಾಪ್ಲಿನ್‌ನ ಅತ್ಯುತ್ತಮ ಚಿತ್ರವೆನ್ನಲಾದ "ದಿ ಟ್ರ್ಯಾಂಪ್" (ತಿರುಕ) ಬಿಡುಗಡೆ ಆಯಿತು. ಆಗ ಚಾಪ್ಲಿನ್ ಎಸ್ಸಾನೆ ಕಂಪೆನಿಯ ಕಲಾವಿದನಾಗಿದ್ದ. ಆತ ಕಲಾವಿದನಾಗಿ ಭದ್ರತೆಯ ಬೇರು ಬಿಟ್ಟದ್ದು ಇಲ್ಲಿಯೇ.

1916ರಲ್ಲಿ ಚಾಪ್ಲಿನ್ 'ಮ್ಯೂಚ್ಯುಯಲ್' ಕಂಪೆನಿಗೆ ಸೇರಿದ. ಅಲ್ಲಿ ಆತನಿಗೆ ವಾರಕ್ಕೆ ಹತ್ತು ಸಾವಿರ ಡಾಲರ್‌ಗಳ ಅಭೂತಪೂರ್ವ ಸಂಭಾವನೆ ಒಂದೂವರೆ ಸಾವಿರ ರೂಪಾಯಿಗಳ ಬೋನಸ್ ನೀಡುವ ಒಪ್ಪಂದವಾಗಿತ್ತು. ಅಲ್ಲಿ ಒಂದು ವರ್ಷದ ಅವಧಿಯಲ್ಲಿ ಚಾಪ್ಲಿನ್ ಹನ್ನೆರಡು ಚಿತ್ರಗಳಲ್ಲಿ ಅಭಿನಯಿಸಿದ್ದ. ಈ ಕಾಲದಲ್ಲಿ ತನ್ನದೇ ಪ್ರೇಕ್ಷಕ ಸಮೂಹವನ್ನು ಸಂಪಾದಿಸಿದ ಚಾಪ್ಲಿನ್ ನಗಿಸುತ್ತಲೇ ಜನರಲ್ಲಿ ಕಣ್ಣೀರು ತರಿಸುತ್ತಿದ್ದ.

'ಚಕ್ರವರ್ತಿಯಾಗುವ ಬಯಕೆ ನನಗಿಲ್ಲ'

ಚಾಪ್ಲಿನ್‌ನ ರಾಜಕೀಯ ಒಲವು–ನಿಲುವುಗಳು ಆತನ ಜೀವನದುದ್ದಕ್ಕೂ ಹಲವಾರು ವಿವಾದಗಳನ್ನು ಹುಟ್ಟುಹಾಕಿತ್ತು. ಕಮ್ಯುನಿಸಮ್ ಬಗ್ಗೆ ಆತನ ಒಲವು ಹೆಚ್ಚು ದಿನ ರಹಸ್ಯವಾಗಿ ಉಳಿಯಲಿಲ್ಲ. ಕಮ್ಯುನಿಸ್ಟ್ ಸಂಬಂಧದ ಬಗ್ಗೆ ಚಾಪ್ಲಿನ್‌ನ ವಿಚಾರಣೆ ನಡೆಸಲು ಅಮೆರಿಕ ಸರಕಾರ ಇಚ್ಛಿಸಿದಾಗ ಆತ 'ನಾನು ಕಮ್ಯುನಿಸ್ಟ್ ಅಲ್ಲ. ನನ್ನ ಜೀವನದಲ್ಲಿ ನಾನೆಂದೂ ಯಾವ ರಾಜಕೀಯ ಪಕ್ಷವನ್ನಾಗಲಿ, ಸಂಸ್ಥೆಯನ್ನಾಗಲಿ ಸೇರುವುದಿಲ್ಲ. ಆದರೆ ನಾನೊಬ್ಬ ಶಾಂತಿದೂತ. ಹಾಗೆಂದು ಹೇಳಿಕೊಳ್ಳಲು ನನಗೆ ಹೆಮ್ಮೆಯಿದೆ' ಎಂದು ಗುಡುಗಿದ್ದ.

ಆದರೆ ಅಮೆರಿಕದ ಸರಕಾರ ಚಾಪ್ಲಿನ್‌ನ ಸಮಜಾಯಿಷಿ ಕೇಳಲು ಸಿದ್ಧವಿರಲಿಲ್ಲ. ಚಾಪ್ಲಿನನ್ನು ಗಡಿಪಾರು ಮಾಡಬೇಕೆಂದು ಆಗಲೇ ಅಮೆರಿಕದಲ್ಲಿ ಕೂಗೆದ್ದಿತ್ತು. 1952ರಲ್ಲಿ ಲೈಮ್‌ಲೈಟ್ ಚಿತ್ರದ ಪ್ರೀಮಿಯರ್ ಪ್ರದರ್ಶನದ ವೀಕ್ಷಣೆಗೆಂದು ಚಾಪ್ಲಿನ್ ಲಂಡನ್‌ಗೆ ಹೋಗಿದ್ದಾಗ ಆತನಿಗೆ ಮರಳಿ ಅಮೆರಿಕಕ್ಕೆ ಬರಲು ವೀಸಾ ನಿರಾಕರಿಸಲಾಯಿತು.

ಕೆರಳಿದ ಚಾಪ್ಲಿನ್ ಮತ್ತೆ ಅಮೆರಿಕಕ್ಕೆ ಕಾಲಿಡುವುದಿಲ್ಲವೆಂದು ಪ್ರತಿಜ್ಞೆ ಮಾಡಿ ಸ್ವಿಜರ್‌ಲೇಂಡಿನಲ್ಲಿ ನೆಲೆಸಿದ.

ಆದರೆ 1972 ರಲ್ಲಿ "ವಿಶೇಷ ಅಕಾಡೆಮಿ ಪ್ರಶಸ್ತಿ" ಸ್ವೀಕರಿಸಲು ಮತ್ತೆ ಅಮೆರಿಕಕ್ಕೆ ಕಾಲಿಟ್ಟ. ಚಾಪ್ಲಿನ್‌ಗೆ ನ್ಯೂಯಾರ್ಕ್‌ನಲ್ಲಿ ಅಭೂತಪೂರ್ವ ಸ್ವಾಗತ ದೊರೆಯಿತು. ಜನರ ಅಭಿಮಾನ ಕಂಡು ಚಾಪ್ಲಿನ್ ಗದ್ಗದಿತನಾಗಿ "ಇದು ನನ್ನ ಪುನರ್ಜನ್ಮ. ನಾನು ಮತ್ತೊಮ್ಮೆ ಹುಟ್ಟಿಬಂದಿದ್ದೇನೆ" ಎಂದು ತನ್ನ ಕೃತಜ್ಞತೆ ಸಲ್ಲಿಸಿದ.

42 ವರ್ಷಕಾಲ ಅಮೆರಿಕದಲ್ಲಿ ನೆಲೆಸಿದ್ದರೂ ಚಾಪ್ಲಿನ್ ಅಲ್ಲಿನ ಪೌರತ್ವ ಪಡೆದಿರಲಿಲ್ಲ. ಇದು ಅಮೆರಿಕನ್ನರ ತೀವ್ರ ಅಸಹನೆಗೆ ಕಾರಣವಾಗಿತ್ತು. ಇದರ ಜತೆಗೆ ಚಾಪ್ಲಿನನ ಚಿತ್ರಗಳಾದ "ಮಾಡರ್ನ್ ಟೈಮ್ಸ್" ಮತ್ತು "ಮಾನ್‌ಸಿಯುರ್ ವರ್ಡೋಕ್ಸ್" ಕೂಡ ಅಮೆರಿಕದಲ್ಲಿ ವ್ಯಾಪಕ ಟೀಕೆಗೊಳಗಾಗಿತ್ತು.

ಮೊದಲನೇ ಜಾಗತಿಕ ಯುದ್ಧದ ವೇಳೆ ಸೇನೆಗೆ ಸೇರಲು ಯುರೋಪ್‌ಗೆ ಹಿಂದಿರುಗಲು ವೈದ್ಯಕೀಯ ನೆಲೆಯಲ್ಲಿ ನಿರಾಕರಿಸಿದ ಚಾಪ್ಲಿನ್ ಮೇಲೆ ಟೀಕೆಗಳ ಸುರಿಮಳೆಯನ್ನೇ ಸುರಿಸಲಾಗಿತ್ತು. ಚಾಪ್ಲಿನ್ ಅದನ್ನು ಲಕ್ಷ್ಯಸದೆ ವಹಿವಾಟಾಗಿ ತನ್ನ ಕೆಲಸದಲ್ಲಿ ನಿರತನಾಗಿದ್ದ.

ತನ್ನ ಬದುಕಿನ ಕೊನೆಯ ದಿನಗಳಲ್ಲಿ ನಿರ್ಮಿಸಿದ "ಮಾನ್‌ಸಿಯುರ್ ವರ್ಡೋಕ್ಸ್" ಕೂಡಾ ಅಮೆರಿಕದ ಜನರನ್ನು ರೊಚ್ಚಿಗೆಬ್ಬಿಸಿತ್ತು. ಬಂಡವಾಳಶಾಹಿ ವ್ಯವಸ್ಥೆಯನ್ನು ತೀರಾ ವ್ಯಂಗ್ಯವಾಗಿ ಚಾಪ್ಲಿನ್ ಈ ಚಿತ್ರದಲ್ಲಿ ಅಣಕವಾಡಿದ್ದ.

ರಾಜಕೀಯ ಟೀಕಾಕಾರರಿಗೆಲ್ಲ ಚಾಪ್ಲಿನ್ "ದಿ ಗ್ರೇಟ್ ಡಿಕ್ಟೇಟರ್" ಚಿತ್ರದಲ್ಲಿ ಉತ್ತರ ನೀಡಿದ್ದ. ಆ ಚಿತ್ರದ ಸರ್ವಾಧಿಕಾರಿ ಅಡಿನೊಯ್ಡ್‌ನ ಕೊನೆಯ ಭಾಷಣದಲ್ಲಿ ಚಾಪ್ಲಿನ್ ತನ್ನ ಜೀವನದ ಸಿದ್ಧಾಂತವನ್ನೇ ಬಿಚ್ಚಿಟ್ಟಿದ್ದಾನೆ.

ಇದರಲ್ಲಿ ಪ್ರೇಕ್ಷಕರನ್ನು ನೇರವಾಗಿ ಉದ್ದೇಶಿಸಿ ಮಾತಾಡುವ ಚಾಪ್ಲಿನ್ "ಕ್ಷಮಿಸಿ ನನಗೆ ಚಕ್ರವರ್ತಿಯಾಗುವ ಬಯಕೆಯಿಲ್ಲ. ನನಗೆ ಆಳುವ ಇಲ್ಲವೇ ಗೆಲ್ಲುವ ಇಚ್ಛೆಯೂ ಇಲ್ಲ. ಸಾಧ್ಯವಾದರೆ ಎಲ್ಲರಿಗೂ ಅವರು ಯಹೂದಿಗಳು–ಯಹೂದಿಯೇತರರು, ಕರಿಯರು–ಬಿಳಿಯರು ಯಾರೇ ಆಗಿರಲಿ ಅವರಿಗೆಲ್ಲ ಸಹಾಯ ಮಾಡುವೆ..." ಎಂದು ತೀರಾ ಭಾವುಕನಾಗಿ ತನ್ನ ಮಾತು ಪ್ರಾರಂಭಿಸುತ್ತಾನೆ

... ನಮಗಿಂದು ಬೇಕಾಗಿರುವುದು ಯಾಂತ್ರಿಕತೆ ಅಲ್ಲ, ಮಾನವೀಯತೆ. ಕೇವಲ ಜಾಣತನವಲ್ಲ ದಯೆ ಮತ್ತು ಸಭ್ಯತೆ, ಈ ಮೌಲ್ಯಗಳನ್ನು ದೂರವಿಟ್ಟು ಜಗತ್ತು ರಣ ರಂಗವಾಗುತ್ತದೆ. ಅಲ್ಲಿ ಯಾರೂ ಉಳಿಯುವುದಿಲ್ಲ...

ಈ ಮೌಲ್ಯಗಳಿಗಾಗಿ ನಾವು ಹೋರಾಡೋಣ. ರಾಷ್ಟ್ರ–ರಾಷ್ಟ್ರಗಳ ನಡುವಿನ ಅಂತರದ ಗೋಡೆಯನ್ನು ಮುರಿದು ಈ ಜಗತ್ತನ್ನು ಮುಕ್ತಗೊಳಿಸಲು ಕೈ ಜೋಡಿಸೋಣ. ಸ್ವಾರ್ಥ, ದ್ವೇಷ, ಅಸಹನೆಗಳಿಂದ ಮುಕ್ತವಾದ ಹೊಸ ಲೋಕವೊಂದನ್ನು ಕಟ್ಟೋಣ. ಪ್ರಜಾಪ್ರಭುತ್ವದ ನೆಲೆಯಲ್ಲಿ ನಾವು ಒಂದಾಗೋಣ...

ಇಪ್ಪತ್ತೊಂದನೇ ಶತಮಾನದ ಹೊಸ್ತಿಲಲ್ಲಿರುವ ಅಶಾಂತ ಜಗತ್ತಿನ ಕಿವಿ ಹಿಂಡುತ್ತಿರುವ ಮಾತುಗಳನ್ನು ಚಾಪ್ಲಿನ್ ಹೇಳಿದ್ದಾನೆ ಎಂದೆನಿಸುವುದಿಲ್ಲವೇ?

ದಿ ಗ್ರೇಟ್ ಡಿಕ್ಟೇಟರ್

ಹೆಂಡತಿಯೊಬ್ಬಳು ಮನೆಯೊಳಗಿದ್ದರೆ...

ಜಗತ್ತಿನ ಜನರೆಲ್ಲರ ದುಃಖವನ್ನು ಮರೆಸಿ ನಗಿಸಿದ ಚಾಪ್ಲಿನ್ ವೈಯಕ್ತಿಕ ಬದುಕಿನಲ್ಲಿ ನಕ್ಕಿದ್ದು ತೀರಾ ಕಡಿಮೆ.

ಬೀದಿ ಬದುಕಿನ ಬಾಲ್ಯದ ದಿನಗಳಲ್ಲಿ ಹೊಟ್ಟೆಗೆ ಕೂಳಿಲ್ಲದೆ ನರಳಾಡಿದ ಚಾಪ್ಲಿನ್, ನಟನಾಗಿ ಮೆರೆದು ಹಣದ ರಾಶಿಯ ಮೇಲೆ ಕೂತಾಗ ವೈಯಕ್ತಿಕ ಬದುಕಿನಲ್ಲಿ ನೆಮ್ಮದಿ ಕಾಣದೆ ತೊಳಲಾಡಿದ. ಸಿನಿಮಾ ಕತೆಯನ್ನು ಮೀರಿದ ದುರಂತ ಬದುಕು ಆತನದು.

ಚಾಪ್ಲಿನ್‌ನ ವೈವಾಹಿಕ ಬದುಕು ಹಲವಾರು ಟೀಕೆ-ಟಿಪ್ಪಣಿಗಳಿಗೆ ದಾರಿ ಮಾಡಿ ಕೊಟ್ಟಿದ್ದುಂಟು. 1918 ರಲ್ಲಿ ಚಾಪ್ಲಿನ್ ಮೊದಲ ಮದುವೆಯಾದ. ಆಕೆ ಹದಿನಾರರ ಹರೆಯದ ಎಕ್ಸ್ಟ್ರಾ ನಟಿ ಮಿಲ್ಡ್ರೆಡ್ ಹ್ಯಾರಿಸ್. ಎರಡು ವರ್ಷಗಳಲ್ಲೇ ಅವರ ವಿಚ್ಛೇದನ ಆಯಿತು.

ತನ್ನ 35ನೇ ವಯಸ್ಸಿನಲ್ಲಿ ಚಾಪ್ಲಿನ್ ಎರಡನೇ ಮದುವೆ ಆದ. ಆಕೆಯೂ ಹದಿನಾರರ ಹರೆಯದ ನಟಿ ಲೋಲಿತ ಮ್ಯಾಕ್‌ಮುರ್ರೆ. ಆಕೆ ಚಿತ್ರರಂಗಕ್ಕೆ ಪದಾರ್ಪಣ ಮಾಡಿದ ಬಳಿಕ ತನ್ನ ಹೆಸರನ್ನು ಲೀಟಾ ಗ್ರೇ ಎಂದು ಬದಲಿಸಿಕೊಂಡಳು. ಮೂರು ವರ್ಷಗಳ ಕಾಲ ಮುಂದುವರಿದ ಈ ವೈವಾಹಿಕ ಬದುಕಿನಲ್ಲಿ ಇಬ್ಬರು ಗಂಡು ಮಕ್ಕಳು ಜನಿಸಿದರು–ಚಾರ್ಲ್ಸ್ ಜ್ಯೂನಿಯರ್ ಮತ್ತು ಸಿಡ್ನಿ ಚಾಪ್ಲಿನ್. ಆಗಲೇ ಚಾಪ್ಲಿನ್‌ನ ದಾಂಪತ್ಯ ಬದುಕಿನ ಬಿರುಕು ಅಂತರರಾಷ್ಟ್ರೀಯ ಮಟ್ಟದ ಸುದ್ದಿಯಾಗಿತ್ತು. ಕೊನೆಗೂ ಕೋಟ್ಯಂತರ ಡಾಲರ್ ಪರಿಹಾರ ನೀಡಿ ಚಾಪ್ಲಿನ್ ಎರಡನೇ ಹೆಂಡತಿಯಿಂದಲೂ ವಿಚ್ಛೇದನ ಪಡೆದ.

ತನ್ನ ವೈವಾಹಿಕ ಬದುಕು ಬೀದಿ ಸುದ್ದಿಯಾದ ಬೆಳವಣಿಗೆಯಿಂದ ನೊಂದ ಚಾಪ್ಲಿನ್ ತನ್ನ 44ನೇ ವಯಸ್ಸಿನಲ್ಲಿ ರಹಸ್ಯವಾಗಿ ಮೂರನೇ ಮದುವೆಯಾದ. ಆಕೆ 19ರ ಹರೆಯದ ಪೌಲೆಟ್ ಗೊಡಾರ್ಡ್. ಸಮುದ್ರ ಮಧ್ಯೆ ನಡೆದ ಈ ವಿವಾಹವನ್ನು ಚಾಪ್ಲಿನ್ ಮೂರು ವರ್ಷಗಳ ಕಾಲ ಗುಟ್ಟಾಗಿಟ್ಟಿದ್ದ.

"ಮೊಡರ್ನ್ ಟೈಮ್ಸ್" ಚಿತ್ರ ಬಿಡುಗಡೆಯಾದಾಗ ಚಾಪ್ಲಿನ್ ಈ ವಿವಾಹವನ್ನು ಬಟ್ಟಬಯಲು ಮಾಡಿದ. ಆತನ ಮುಂದಿನ ಚಿತ್ರ 'ದಿ ಗ್ರೇಟ್ ಡಿಕ್ಟೇಟರ್' ಚಿತ್ರದಲ್ಲಿ ಪೌಲೆಟ್ ಸಹ ನಟಿಯಾಗಿದ್ದಳು. ಒಂಬತ್ತು ವರ್ಷಗಳ ನಂತರ 1942 ರಲ್ಲಿ ಚಾಪ್ಲಿನ್ ತನ್ನ ಮೂರನೇ ವಿವಾಹದಿಂದಲೂ ಮುಕ್ತನಾದ.

ಇದೇ ವೇಳೆ ಚಾಪ್ಲಿನ್ ವಿರುದ್ಧ ನಟಿಯೊಬ್ಬಳು ಹೂಡಿದ ಪಿತೃತ್ವದ ಮೊಕದ್ದಮೆಯೊಂದು ಪತ್ರಿಕೆಗಳಲ್ಲಿ ಭಾರೀ ಸುದ್ದಿಯಾಯಿತು. ಅಪ್ರಾಪ್ತ ವಯಸ್ಸಿನ ಆ ನಟಿಯೊಂದಿಗೆ ಚಾಪ್ಲಿನ್ ಹೊಂದಿದ್ದನೆನ್ನಲಾದ ಅನೈತಿಕ ಸಂಬಂಧದ ಬಗ್ಗೆ ರಂಗುರಂಗಿನ ಸುದ್ದಿ ಚಿತ್ರಗಳು ಪತ್ರಿಕೆಗಳಲ್ಲಿ ರಂಜಿಸಿದವು. ಅಪ್ರಾಪ್ತ ವಯಸ್ಸಿನ ಬಾಲಕಿಯ ಜತೆಯಲ್ಲಿನ ಅನೈತಿಕ ಸಂಬಂಧದ ಬಗ್ಗೆ ಅಪವಾದನೆಯನ್ನು ನ್ಯಾಯಾಲಯ ತಳ್ಳಿ ಹಾಕಿದರೂ ನಟಿಯ ಮಗುವಿನ ತಂದೆ ಚಾಪ್ಲಿನ್ ಎಂದು ತೀರ್ಪು ನೀಡಿತು.

ವೈಯಕ್ತಿಕ ಬದುಕು ಮೂರಾಬಟ್ಟೆಯಾದ ಆಘಾತದಿಂದ ನೊಂದ ಚಾಪ್ಲಿನ್ ಕೊನೆಗೂ ಇದಕ್ಕೆಲ್ಲ ಶಾಶ್ವತ ಪರಿಹಾರವೆಂಬಂತೆ ಊನ ಓ 'ನೀಲ್‌ಳನ್ನು ಪ್ರಾಮಾಣಿಕವಾಗಿ ಮದುವೆಯಾದ. ಆಕೆ ಖ್ಯಾತ ನಾಟಕಕಾರ ಯೂಜಿನ್ ಓ 'ನೀಲ್' ಮಗಳು. ತಂದೆಯ ತೀವ್ರ ವಿರೋಧದ ಹೊರತಾಗಿಯೂ ಊನ ಚಾಪ್ಲಿನನ್ನು ಮದುವೆಯಾದಳು. ಆಗ ಚಾಪ್ಲಿನ್‌ಗೆ 54 ಆಕೆಗೆ18.

ಕೊನೆಗೂ ಚಾಪ್ಲಿನ್‌ಗೆ ಸ್ವರ್ಗಸಿಕ್ಕಿತ್ತು. ಇಚ್ಛೆಯನ್ನರಿತು ನಡೆದ ಹೆಂಡತಿ ಇಳಿ ವಯಸ್ಸಿನಲ್ಲಿ ಚಾಪ್ಲಿನ್‌ನ ಊರುಗೋಲಾಗಿದ್ದಳು. ಇವರಿಗೆ ಎಂಟು ಮಕ್ಕಳು. ಅವರಲ್ಲಿ ಜೆರಾಲ್ಡಿನ್ ಚಾಪ್ಲಿನ್ ನಂತರ ಖ್ಯಾತ ನಟಿಯಾದಳು.

ಚಾರ್ಲಿಯ ನೆನಪುಗಳು

ಚಾಪ್ಲಿನ್ ದಿನದಿಂದ ದಿನಕ್ಕೆ ಜನಪ್ರಿಯನಾಗ ತೊಡಗಿದ್ದ. ಅಮೆರಿಕದ ಪ್ರಖ್ಯಾತ ಕಂಪೆನಿ ಫಸ್ಟ್ ನ್ಯಾಷನಲ್ ಚಾಪ್ಲಿನ್‌ನೊಂದಿಗೆ ತಲಾ ಎರಡು ರೀಲುಗಳ ಎಂಟು ಚಿತ್ರಗಳಿಗಾಗಿ ಹತ್ತು ಲಕ್ಷ ಡಾಲರ್‌ಗಳ ಕರಾರು ಮಾಡಿಕೊಂಡಿತು. ಆ ಅವಧಿಯ ಎರಡು ಅತ್ಯುತ್ತಮ ಚಿತ್ರಗಳೇ 'ಶೋಲ್ಡರ್ ಆರ್ಮ್ಸ್' (1918)ಮತ್ತು 'ದಿ ಕಿಡ್' (1921) 'ದಿ ಕಿಡ್' ಚಿತ್ರದ ಮೂಲಕ ಚಾಪ್ಲಿನ್ ಮೊದಲ ಬಾರಿಗೆ ಭಾವುಕತನದ ಮಸಾಲೆ ತುಂಬ ತೊಡಗಿದ. ಆ ನಂತರದ ಆತನ ಹೆಚ್ಚಿನ ಚಿತ್ರಗಳಲ್ಲಿ ತನ್ನ ಬಾಲ್ಯದ ಅನಾಥ ಬದುಕು ಇಣುಕು ಹಾಕುತ್ತಿತ್ತು.

ಆ ಹೊತ್ತಿಗೆ ಚಾಪ್ಲಿನ್ ಅಂತರಾಷ್ಟ್ರೀಯ ಮಟ್ಟದ ತಾರೆಯಾಗಿದ್ದ. ಸ್ವಂತ ಕಂಪೆನಿ ಸ್ಥಾಪಿಸಲು ಅದೇ ಸಕಾಲವೆಂದು ಬಗೆದ ಚಾಪ್ಲಿನ್ ಹಾಲಿವುಡ್‌ನ ಕೇಂದ್ರ ಸ್ಥಾನವಾದ ಲಾ ಬ್ರೀ ಅವೆನ್ಯೂವಿನಲ್ಲಿ ಸ್ವಂತ ಸ್ಟುಡಿಯೋ ಕಟ್ಟಿದ.

ಮಹಾತ್ಮಾ ಗಾಂಧಿ ಜತೆ

ಈ ಸ್ಟುಡಿಯೋದ ಉದ್ಘಾಟನೆ ಚಾಪ್ಲಿನ್ ಶೈಲಿಯಲ್ಲಿಯೇ ನಡೆಯಿತು. ಮುಂಬಾಗಿಲಿನ ಗೋಡೆಯ ಒದ್ದೆ ಸಿಮೆಂಟಿನ ಮೇಲೆ ತನ್ನ ಪ್ರಖ್ಯಾತ ದೊಡ್ಡ ಬೂಟುಗಳನ್ನೂರಿಸಿ ಅದರ ಆಕೃತಿ ಪಡಿಸಿದ ಚಾಪ್ಲಿನ್ ತನ್ನ ಹೆಸರು ಉದ್ಘಾಟನೆಯ ದಿನಾಂಕವಾದ ಜನವರಿ 21, 1918ನ್ನು ತನ್ನ ಕೈಯ ಬೆತ್ತದಿಂದ ಬರೆದ.

ಚಾಪ್ಲಿನ್ ಅಮೆರಿಕ ತ್ಯಜಿಸಿದ ನಂತರ ಈ ಸ್ಟುಡಿಯೋ ಪಾಳುಬಿತ್ತು. ಆ ನಂತರ ಅದನ್ನು ಸೂಪರ್ ಮಾರ್ಕೆಟ್ ಮತ್ತು ರೆಕಾರ್ಡಿಂಗ್ ಕಂಪೆನಿಯನ್ನಾಗಿ ಪರಿವರ್ತಿಸಲಾಯಿತು. ಮೂವತ್ತು ವರ್ಷಗಳ ಕಾಲ ಚಾಪ್ಲಿನ್ ಕೂತಿದ್ದ ಆತನ ಕುರ್ಚಿಯನ್ನು ಜುಜುಬಿ ಬೆಲೆಗೆ ಹರಾಜು ಹಾಕಲಾಯಿತು.

1919ರಲ್ಲಿ ಚಾಪ್ಲಿನ್ ಇತರರೊಡಗೂಡಿ "ಯುನೈಟೆಡ್ ಆರ್ಟಿಸ್ಟ್ ಕಾರ್ಪೊರೇಷನ್" ಸ್ಥಾಪಿಸಿದ. ಚಾಪ್ಲಿನ್‌ಗೆ ಮೊದಲ ಬಾರಿಗೆ ಅಮೆರಿಕದಿಂದ ಹೊರಗೆ ಇಣುಕಿನೋಡುವ ಇಚ್ಛೆಯುಂಟಾಯಿತು. ಅದಕ್ಕಾಗಿ ಯುರೋಪ್‌ನಾದ್ಯಂತ ಪ್ರವಾಸ ಮಾಡಿದ ಚಾಪ್ಲಿನ್ ಜನರ ಪ್ರೀತಿ-ಅಭಿಮಾನಕ್ಕೆ ಪಾತ್ರನಾಗಿದ್ದ. ಲಂಡನಿನ ಬೀದಿ ಬಾಲಕ ಜಗತ್ತಿನಾದ್ಯಂತ ಕಲಾಭಿಮಾನಿಗಳ ಆರಾಧ್ಯ ದೈವವಾಗಿದ್ದ. ಈ ಪ್ರವಾಸದ ಅನುಭವವನ್ನು 1922ರಲ್ಲಿ ಬರೆದ 'ಮೈ ವಂಡರ್‌ಫುಲ್ ವಿಸಿಟ್' ಎಂಬ ಪುಸ್ತಕದಲ್ಲಿ ಚಾಪ್ಲಿನ್ ವಿವರವಾಗಿ ಬಣ್ಣಿಸಿದ್ದಾನೆ.

ಪ್ರವಾಸದಿಂದ ಹಿಂದಿರುಗಿದ ಚಾಪ್ಲಿನ್ 1923ರಲ್ಲಿ 'ವುಮನ್ ಆಫ್ ಪ್ಯಾರಿಸ್' ಚಿತ್ರ ನಿರ್ದೇಶಿಸಿದ. ಚಾಪ್ಲಿನ್ ಅಭಿನಯಿಸದೆ ಕೇವಲ ನಿರ್ದೇಶಿಸಿದ ಏಕೈಕ ಮೂಕಿ ಚಿತ್ರ ಇದು, ಅದು ಗಳಿಕೆಯಲ್ಲಿ ನಿರೀಕ್ಷಿತ ಯಶಸ್ಸು ಕಾಣಲಿಲ್ಲ.

ಚಾಪ್ಲಿನ್‌ನ ಮುಂದಿನ ಚಿತ್ರ 'ದಿ ಗೋಲ್ಡ್ ರಶ್' ಖ್ಯಾತಿ, ಹಣ ಎರಡರ ಮಹಾಪೂರವನ್ನೇ ಒಯ್ದು ತಂದ ಜನಪ್ರಿಯತೆಯಲ್ಲಿ ಸರ್ವಕಾಲಿಕ ದಾಖಲೆ ನಿರ್ಮಿಸಿದ ಚಿತ್ರ ಇದು. ಚಿತ್ರದುದ್ದಕ್ಕೂ ಪ್ರೇಕ್ಷಕರನ್ನು ಮನಸಿದ್ದಾಗಲೆಲ್ಲ ಕಚಗುಳಿ ಇಟ್ಟು ನಗಿಸುವ ಕೆಲವು ಸ್ಮರಣೀಯ ಘಟನೆಗಳಿವೆ.

ಚಾಪ್ಲಿನ್ ತನ್ನ ಖಾಸಗಿ ಜೀವನದಲ್ಲಿ ಹೋರಾಡುತ್ತ ಬಂದ 'ತಿರುಕ'ನ ಪಾತ್ರ ಇದರಲ್ಲಿ ಪೂರ್ಣವಾಗಿ ಅನಾವರಣಗೊಂಡಿದೆಯೆನ್ನಬಹುದು. ಹಸಿವಿನಿಂದ ಚಡಪಡಿಸುತ್ತ ತನ್ನ ಹಳೆಯ ಬೂಟುಗಳನ್ನು ಕಚ್ಚಿ ತಿನ್ನಲು ಕೂಡುವ ಚಾಪ್ಲಿನ್ ನಗಿಸುವ ಜತೆಗೆ ಎಲ್ಲೋ ಒಂದು ಮೂಲೆಯಲ್ಲಿ ಮನಸ್ಸನ್ನು ತಟ್ಟುತ್ತಾನೆ.

ಅವನ ಮುಂದಿನ ಚಿತ್ರ 'ಸರ್ಕಸ್', ಅದರಲ್ಲಿ ಪಂಜರದಲ್ಲಿ ನಿದ್ರಿಸುತ್ತಿದ್ದ ಸಿಂಹದೊಂದಿಗೆ ಚಾರ್ಲಿಯನ್ನು ಕೂಡಿ ಹಾಕಲಾಗಿದೆ. ಸಣ್ಣ ಶಬ್ದ ಕೂಡಾ ಆತನ ಮೃತ್ಯುವಾಗಿ ಕಾಡುವ ಸಾಧ್ಯತೆಯಿದೆ. ಪ್ರೇಕ್ಷಕರೆಲ್ಲ ಉಸಿರು ಬಿಗಿಹಿಡಿದು ನೋಡುತ್ತಾರೆ. ಮತ್ತೊಂದು ದೃಶ್ಯದಲ್ಲಿ ಎತ್ತರದಲ್ಲಿ ಬಿಗಿದ ತಂತಿಯಲ್ಲಿ ನಡೆಯುತ್ತಿರುವ ಚಾಪ್ಲಿನ್‌ನನ್ನು ಕೋತಿಗಳ ಹಿಂಡು

ವಿಶೇಷ ಅಕಾಡೆಮಿ ಪ್ರಶಸ್ತಿ ಜತೆಗೆ

ಮಧ್ಯ ವಯಸ್ಸು ಚಾರ್ಲಿ

"ದಿ ಸರ್ಕಸ್" ಚಿತ್ರದಲ್ಲಿ

ಮುಕ್ತಿದೆ. ಷಮತೋಲನಕ್ಕಾಗಿ ಪರದಾಡುತ್ತಿರುವ ಚಾಪ್ಲಿನ್-ಇವೆಲ್ಲ ಸಾವಿರಾರು ದೃಶ್ಯಗಳಂತೆ ಒರಟವಲ್ಲಿ ಕಂಡರೂ ಆ ಸನ್ನಿವೇಶಗಳಲ್ಲಿ ಚಾಪ್ಲಿನ್ ನೀಡುವ ಅಸಾಮಾನ್ಯ ಅಭಿನಯ ಅತನನ್ನು ಅದ್ವಿತೀಯ ನಟನನ್ನಾಗಿ ಮಾಡಿದೆ.

ನಮ್ಮ ನಿರೀಕ್ಷೆಯನ್ನು ಕಣ್ಣಾ ಮುಚ್ಚಿ ಗೋಳಿಸುವುದರೊಂದು ದಾರಿಯಲ್ಲಿ ಸಿಕ್ಕಿ ಹಾಕಿಕೊಂಡ ತೊಡಕುಗಳಿಂದ ಬಿಡಿಸಿಕೊಂಡು ಹೋಗುವುದೇ ಚಾಪ್ಲಿನ್ ಅಭಿನಯದ ಮುಖ್ಯ ಆಕರ್ಷಣೆ.

ಮುಷ್ಟಿಯಿಂದ ಗುದ್ದಲು ಮೂತಿ ಉದ್ದಗೊಳಿಸಿ ಸಿದ್ಧನಾಗಿನಿಂತ ಚಾಪ್ಲಿನ್ ತಕ್ಷಣ ಎದುರಾಳಿಗೆ ಕಾಲು-ಗೆಲಿಂದ ಒದ್ದು ಓಡುತ್ತಾನೆ. ಇಲ್ಲವಾದರೆ ಅತನ ತೊಡೆಗಳ ಮೇಲೇರಿ ಕೂರುತ್ತಾನೆ.

ಪಾದರಸದ ಚಲನೆಯಂತಹ ಚಾಪ್ಲಿನನ ಚುರುಕು ನಡೆ ಪ್ರಕೃತಿಯ ಎಲ್ಲ ನಿಯಮಗಳನ್ನು ಮೀರಿಸುತ್ತದೆ. ಕಾಲ್ತಲ್ಲಿ ಕೂರದ, ನಿಂತಲ್ಲಿ ನಿಲ್ಲದ, ಕುಣಿಯುತ್ತ, ಹಾರುತ್ತ, ಓಡುತ್ತ ನಟಿಸುವ ಚಾಪ್ಲಿನ್ ಪ್ರತಿಯೊಂದು ಚಲನೆಗೂ ಸಂಗೀತಕ್ಕೆ ಸಂಗೀತವಾದ ಲಯವನ್ನು ಕಾಣಬಹುದು. ಇದು ಚಾಪ್ಲಿನ್ ವಿಶೇಷತೆ.

ಪ್ರಾರಂಭದ ದಿನಗಳ ಚಾಪ್ಲಿನ್‌ನ ಹೆಚ್ಚಿನ ಕಿರು ಚಿತ್ರಗಳು ರಂಗ ಭೂಮಿಯ ಗುಂಗಿನಲ್ಲಿಯೇ ಮೂಡಿ ಬಂದವುಗಳು. ಅದರಿಂದಾಗಿ ಬೆಳ್ಳಿತೆರೆಗೆ ಅದು ಹೊಂದಿಕೊಳ್ಳದೆ ಅಲ್ಲಲ್ಲಿ ಅಭಾಸ ನಿರ್ಮಾಣವಾದದ್ದಿದೆ. ಅತಿಭಾವುಕತೆ ವಿಜೃಂಭಿತ ದೃಶ್ಯ ಸಂಯೋಜನೆ ಅವುಗಳಲ್ಲಿ ಸಾಮಾನ್ಯವಾಗಿತ್ತು.

ಅನಾಥ ಬಾಲಕನಾಗಿ ಹುಟ್ಟೂರು ತ್ಯಜಿಸಿ ಬಂದು 48 ವರ್ಷಗಳ ಕಾಲ ಅಮೆರಿಕದಲ್ಲಿ ಅಂತರ್ರಾಷ್ಟ್ರೀಯ ತಾರೆಯಾಗಿ ಮೆರೆದ ಚಾರ್ಲಿ ಚಾಪ್ಲಿನ್ ಕೊನೆಗೂ ಅಮೆರಿಕಕ್ಕೆ ಮರು ಕಾಲಿರಿಸುವುದಿಲ್ಲವೆಂದು ಶಪಥಮಾಡಿ ಅಲ್ಲಿಂದ ಹೊರ ಬಂದಿದ್ದ.

ಹಣ, ಖ್ಯಾತಿ ಎಲ್ಲವನ್ನೂ ಕೊಟ್ಟಿದ್ದ ಅಮೆರಿಕ ಚಾಪ್ಲಿನನ ಕೊನೆಯ ದಿನಗಳಲ್ಲಿ ಅತ್ಯಂತ ನಿಷ್ಠುರವಾಗಿ ವರ್ತಿಸಿತ್ತು.

ಸ್ವಿಜರ್‌ಲೆಂಡಿನ ತನ್ನ ಬೃಹತ್ ತೋಟದ ಮನೆಯಲ್ಲಿ ಕೊನೆಯ ದಿನಗಳನ್ನು ಕೊನೆಯ ಹೆಂಡತಿಯೊಂದಿಗೆ ಹಾಗೂ ಎಂಟು ಮಕ್ಕಳೊಂದಿಗೆ ಕಳೆದ ಚಾಪ್ಲಿನ್ ತನ್ನ ಮುಂದಿನ "ಎ ಕಿಂಗ್ ಇನ್ ನ್ಯೂಯಾರ್ಕ್" (1957) ಚಿತ್ರವನ್ನು ಇಂಗ್ಲೆಂಡ್‌ನಲ್ಲಿ ನಿರ್ಮಿಸಿದ.

ಈ ಚಿತ್ರದುದ್ದಕ್ಕೂ ಚಾಪ್ಲಿನ್ ಅಮೆರಿಕದ ತನ್ನ ಕಹಿ ಬದುಕನ್ನು ಕಾರಿದ್ದ. ಅಲ್ಲಿನ ಜೀವನ ವಿಧಾನವನ್ನು ಉದ್ದಕ್ಕೂ ಗೇಲಿ ಮಾಡಿದ್ದ. ಈ ಪೂರ್ವಾಗ್ರಹದ ಕಾರಣದಿಂದಲೇ ಗುಣಮಟ್ಟದಲ್ಲಿ ಅದು ಉತ್ತಮವಾಗಿ ಮೂಡಿಬರಲಿಲ್ಲ.

ಆಗಲೇ ಚಾಪ್ಲಿನ್ ಚಿತ್ರರಂಗದ ಮೇಲೆ ತನಗಿದ್ದ ಪ್ರಾರಂಭದ ಹಿಡಿತವನ್ನು ಕಳೆದುಕೊಳ್ಳತೊಡಗಿದ್ದ. ಅದನ್ನು ಮತ್ತೆ ಗಳಿಸಲು ನಡೆಸಿದ ಮತ್ತೊಂದು ಹೊಸ ಪ್ರಯತ್ನ 1966ರಲ್ಲಿ. ಅಮೆರಿಕದ ನೆರವಿನಿಂದ ಇಂಗ್ಲೆಂಡ್‌ನಲ್ಲಿ ನಿರ್ಮಿಸಿದ ಚಿತ್ರ "ದಿ ಕೌಂಟೆಸ್ ಫ್ರಂ ಹಾಂಕಾಂಗ್"

ಖ್ಯಾತ ನಟರಾದ ಮಾರ್ಲನ್ ಬ್ರಾಂಡೊ ಮತ್ತು ಸೋಫಿಯಾ ಲೊರೆನ್ ಈ ಚಿತ್ರದಲ್ಲಿ ಪ್ರಧಾನ ಪಾತ್ರವಹಿಸಿದ್ದರೂ ಚಿತ್ರ ಜನರನ್ನು ರಂಜಿಸುವಲ್ಲಿ ಸೋಲು ಕಂಡಿತು. ಇದು ಚಾಪ್ಲಿನನ ಅತ್ಯಂತ ಕೆಟ್ಟ ಚಿತ್ರ ಎಂದು ವಿಮರ್ಶಕರು ಜರೆದರು.

ಮೂಕಿಯುಗದ ದೊರೆ ಟಾಕಿಯುಗದಲ್ಲಿ ಕೊನೆಗೂ ಸೋಲೊಪ್ಪಿದ್ದ. ಅನಂತರ ಚಾಪ್ಲಿನ್ ಹೊಸ ಚಿತ್ರಗಳನ್ನು ನಿರ್ಮಿಸುವ ಸಾಹಸ ಮಾಡಲಿಲ್ಲ. ಸುಮಾರು 63 ವರ್ಷಗಳ ಕಾಲ ಜಾಗತಿಕ ಚಿತ್ರರಂಗದ ಅನಭಿಷಿಕ್ತ ದೊರೆಯಾಗಿ ಮೆರೆದಾಡಿದ್ದ ಚಾಪ್ಲಿನ್ 1977 ಡಿಸೆಂಬರ್‌ನ ಕ್ರಿಸ್‌ಮಸ್ ರಾತ್ರಿಯಂದು ಕೊನೆಯುಸಿರೆಳೆದ. ಸ್ವಿಜರ್‌ಲೆಂಡಿನಲ್ಲಿ ಅವನ ದಫನ ಮಾಡಲಾಯಿತು.

ಆದರೆ ಸತ್ತ ನಂತರವೂ ಚಾಪ್ಲಿನನನ್ನು ಜನಜಿಡದೆ ಕಾಡಿದರು. 1978 ಮಾರ್ಚ್ 2 ರಂದು, ಗೋರಿಯಲ್ಲಿದ್ದ ಚಾಪ್ಲಿನ್ ಶರೀರದ ಅವಶೇಷಗಳನ್ನು ಯಾರೋ ಕದ್ದೊಯ್ದರು. ಎರಡು ತಿಂಗಳ ನಂತರ ಅದನ್ನು ಪತ್ತೆಹಚ್ಚಲಾಯಿತು.

ಲಂಡನಿನ ಬೀದಿ ಬಾಲಕ ಚಾಪ್ಲಿನನ ಮೃತಶರೀರ ಕೂಡಾ ಕದ್ದೊಯ್ಯುವಷ್ಟು ಅಮೂಲ್ಯವಾಗಿತ್ತು.

—— ಯುನೈಟೆಡ್ ಆರ್ಟಿಸ್ಟ್ ಜೊತೆಗೆ ರಚಿಸುವಾಗ ——

'ಅತ್ಯುತ್ತಮ'ದ ಹುಡುಕಾಟದಲ್ಲಿ

ಚಾರ್ಲಿ ಚಾಪ್ಲಿನ್‌ನ ಅತ್ಯುತ್ತಮ ಚಿತ್ರ ಯಾವುದು ಎಂಬ ಪ್ರಶ್ನೆಗೆ ಒಮ್ಮತದ ಉತ್ತರ ಇಂದಿಗೂ ಸಿಗುವುದಿಲ್ಲ.

1915ರಲ್ಲಿ ಬಿಡುಗಡೆಯಾದ 'ದಿ ಟ್ರ್ಯಾಂಪ್' ಚಿತ್ರವೇ ಅತನ ಅತ್ಯುತ್ತಮ ಚಿತ್ರ ಎನ್ನುವವರಿದ್ದಾರೆ. 'ದಿ ಕಿಡ್' 'ಶೋಲ್ಡರ್ ಆರ್ಮ್ಸ್' ಎಲ್ಲವೂ ಜನರಿಗೆ ಹುಚ್ಚು ಹಿಡಿಸಿದ ಚಿತ್ರಗಳು.

'ದಿ ಗೋಲ್ಡ್ ರಶ್' (1925) 'ಸಿಟಿಲೈಟ್ಸ್' (1931) 'ಮೋಡರ್ನ್ ಟೈಮ್ಸ್' (1936) ಈ 3 ಚಿತ್ರಗಳು ಚಾಪ್ಲಿನ್ ಅದಿನಯದ ಅನುಪಮ ಚಿತ್ರಗಳು ಎಂಬ ಅಭಿಪ್ರಾಯವಿದೆ. ಕೊನೆಯ ಎರಡು ಚಿತ್ರಗಳು ಮೂಕಿಯುಗ ಟಾಕಿಗೆ ಚಿತ್ರಜಗತ್ತು ಕಾಲಿಟ್ಟ ನಂತರ ಬಿಡುಗಡೆಗೊಂಡ ಮೂಕಿಚಿತ್ರಗಳು.

ಚಿತ್ರರಂಗದ ಮೂಕಯುಗದಲ್ಲಿಯೇ ತನ್ನ ಬಣ್ಣದ ಬದುಕಿನ ಬಹುಪಾಲನ್ನೂ ಕಳೆದ ಚಾಪ್ಲಿನ್‌ಗೆ ಚಿತ್ರರಂಗಕ್ಕೆ ದನಿ ಬಂದದ್ದು ಹಲವು ಸಮಸ್ಯೆಗಳಿಗೆ ಕಾರಣವಾಯಿತು.

ಚಾಪ್ಲಿನ್ ಚಿತ್ರಗಳಲ್ಲಿ ಮಾತಿನ ಕೊರತೆ ನ್ಯೂನತೆಯಾಗಿ ಎಂದೂ ಕಂಡಿಲ್ಲ. ತನ್ನ ಮೂಕಾಭಿನಯದ ಮೂಲಕವೇ ಪ್ರೇಕ್ಷಕರೊಂದಿಗೆ ಮಾತಾಡುತ್ತಿದ್ದ ಚಾಪ್ಲಿನ್ ಎಲ್ಲ ಭಾವಗಳನ್ನು ಮಾತಿಲ್ಲದೆ ಅಭಿವ್ಯಕ್ತಿಸಲು ಸಮರ್ಥನಾಗಿದ್ದ. ಮುಖಭಾವ, ನಡಿಗೆ, ನಟನೆಗಳಿಂದಲೇ ಜನರಿಗೆ ಕಚಗುಳಿಯಿಡುತ್ತಿದ್ದ.

ಮಾತು ಅತನಿಗೆ ಒಂದು ತೊಡಕಿನಂತೆ ಕಂಡಿತ್ತು. ಅದುದರಿಂದಲೇ ಚಿತ್ರರಂಗಕ್ಕೆ ಮಾತು ಬಂದ ನಂತರವೂ ಸ್ನೇಹಿತರ ವಿರೋಧವನ್ನು ನಿರ್ಲಕ್ಷಿಸಿ ಚಾಪ್ಲಿನ್ ಎರಡು ಮೂಕಿ ಚಿತ್ರಗಳನ್ನು (ಸಿಟಿ ಲೈಟ್ಸ್, ಮೋಡರ್ನ್ ಟೈಮ್ಸ್) ನಿರ್ಮಿಸಿದ. ಅವುಗಳು ಭರ್ಜರಿ ಯಶಸ್ಸು ಕಂಡಿತು.

ಚಾಪ್ಲಿನ್ ಪ್ರತಿಭೆ ಮೂಕಿ ಚಿತ್ರಗಳಿಗಷ್ಟೇ ಸೀಮಿತವೇನೋ ಎನ್ನುವ ಅಭಿಪ್ರಾಯ ವ್ಯಕ್ತವಾಗತೊಡಗಿದಾಗ ಬಿಡುಗಡೆಗೊಂಡದ್ದು "ದಿ ಗ್ರೇಟ್ ಡಿಕ್ಟೇಟರ್" ಟಾಕಿಯುಗಕ್ಕೆ ಅಗ ಹತ್ತು ವರ್ಷ. ಮೊದಲಬಾರಿಗೆ ಚಾಪ್ಲಿನ್ ಈ ಚಿತ್ರದಲ್ಲಿ ಪರದೆ ಮೇಲೆ ಮಾತನಾಡಿದ. ಅದೂ ವಾಚಾಳಿಯಾಗಿ.

ಫ್ಯಾಸಿಸಂನ್ನು ಗೇಲಿ ಮಾಡುವ ಚಿತ್ರವಿದು. ಸರ್ವಾಧಿಕಾರಿ ಹಿಟ್ಲರನನ್ನೇ ದೃಷ್ಟಿಯಲ್ಲಿಟ್ಟುಕೊಂಡು ಚಾಪ್ಲಿನ್ ಈ ಚಿತ್ರ ನಿರ್ಮಿಸಿದ್ದ.

"ಮಾನವೀಯತೆಯ ಕೊರತೆ ಒಳಗಾದ, ಸ್ವಾತಂತ್ರ್ಯದ ನೆಲೆಕಳೆದ ಮತ್ತು ಮತಿಹೀನತೆಗೆ ಮಯಾರ್ದೆ ಸಿಕ್ಕಿದ 2 ಜಾಗತಿಕ ಯುದ್ಧಗಳ ನಡುವಿನ ಕಾಲದ ಕಥೆಯಿದು" ಎಂಬ ಸಬ್‌ಟೈಟಲ್‌ನೊಂದಿಗೆ ಈ ಚಿತ್ರ ತೆರೆಯಲಿ ಅನಾವರಣಗೊಳ್ಳುತ್ತದೆ.

ಇದರಲ್ಲಿ ಚಾಪ್ಲಿನನದು ದ್ವಿಪಾತ್ರ. ಯಹೂದಿ ಜಾತಿಗೆ ಸೇರಿದ ಕ್ಷೌರಿಕ ಹಾಗೂ ಅಡಿನೊಯ್ಡ್ ಹೈನ್‌ಕೇಲ್ ಎನ್ನುವ ಸರ್ವಾಧಿಕಾರಿ.

ಕ್ಷೌರಿಕ ವೃತ್ತಿಯಲ್ಲಿ ಮಾಯವಾಗಿದ್ದ ಚಾರ್ಲಿಯನ್ನು ಯುದ್ಧಕಾಲದಲ್ಲಿ ಎಳೆದೊಯ್ದು ಸೈನ್ಯಕ್ಕೆ ಸೇರಿಸಲಾಗುತ್ತದೆ. ಸೇನೆಯಲ್ಲಿರುವಾಗ ಗಾಯಗೊಂಡ

'ದಿ ಕಿಡ್'ನಲ್ಲಿ ಜಾಕಿ ಕೋಗನ್ ಜತೆ

ಷ್ಯಲ್ಟ್ಜ್ ಎನ್ನುವ ಪೈಲಟ್‌ನನ್ನು ರಕ್ಷಿಸಲು ಚಾರ್ಲಿ ವಿಮಾನದಲ್ಲಿ ಹೊರಡುತ್ತಾನೆ. ವಿಮಾನ ಅಪಘಾತಕ್ಕೀಡಾಗಿ ಅತ ಸ್ಮರಣಶಕ್ತಿ ಕಳೆದುಕೊಳ್ಳುತ್ತಾನೆ.

20 ವರ್ಷಗಳ ಕಾಲ ಆಸ್ಪತ್ರೆಯಲ್ಲಿದ್ದು ತನ್ನೂರಿಗೆ ಮರಳುವಷ್ಟರಲ್ಲಿ ಅವನ ದೇಶ ಭಾರಿ ಬದಲಾವಣೆಗೊಳಗಾಗಿರುತ್ತದೆ. ಚಾರ್ಲಿಯ ರೂಪವನ್ನೇ ಹೋಲುವ ಅಡಿನೊಯ್ಡ್ ಹೈನ್‌ಕೇಲ್ ಎಂಬ ಸರ್ವಾಧಿಕಾರಿ ಅಧಿಕಾರಕ್ಕೆ ಬಂದಿರುತ್ತಾನೆ.

ಹಿಟ್ಲರ್‌ನನ್ನು ಹೋಲುವ ಅಡಿನೊಯ್ಡ್‌ನ ನಿರಂಕುಶ ಆಡಳಿತ ಮತ್ತು ದುರಾಚಾರಕ್ಕೆ ಮುಗ್ಧ-ಅಸಹಾಯಕ ಜನ ಅದರಲ್ಲೂ ಮುಖ್ಯವಾಗಿ ಯಹೂದಿಗಳೂ ಬಲಿಯಾಗುತ್ತಾರೆ.

ಸಾಮ್ರಾಜ್ಯ ವಿಸ್ತರಣೆಯ ಹುಚ್ಚಿನಿಂದ ಕುರುಡನಾಗಿದ್ದ ಅಡಿನೊಯ್ಡ್ ಬ್ಯಾಕ್ಟೀರಿಯಾ ರಾಜ್ಯದ ಬೆನ್‌ಜಿನೊ ನೆಪಲೊನಿಯೊಂದಿಗೆ ಸಂಧಿ ಮಾಡಿಕೊಂಡು ಆಸ್ಟ್ರಿಲಿಕ್ ಪ್ರಾಂತ್ಯದ ಮೇಲೆ ದಾಳಿ ಮಾಡಲು ನಿರ್ಧರಿಸುತ್ತಾನೆ.

ಈ ಯುದ್ಧದ ವೇಳೆ ಅಡಿನೊಯ್ಡ್‌ನನ್ನು, ಓಡಿಹೋಗಲು ಯತ್ನಿಸುತ್ತಿರುವ ಯಹೂದಿ ಚಾರ್ಲಿ ಎಂದು ತಪ್ಪಾಗಿ ಭ್ರಮಿಸಿ ಸೈನಿಕರು ಬಂಧಿಸುತ್ತಾರೆ. ಯಹೂದಿ ಚಾರ್ಲಿಯನ್ನೂ ಅಡಿನೊಯ್ಡ್ ಎಂದು ಭಾವಿಸಿ ಅತನಿಗೆ ದಾಳಿಯ ನಾಯಕತ್ವ ಕೊಡುತ್ತಾರೆ.

ಇದು 'ದಿ ಗ್ರೇಟ್ ಡಿಕ್ಟೇಟರ್'ಕತೆ. ಚಿತ್ರದುದ್ದಕ್ಕೂ ಚಾಪ್ಲಿನ್ ಹಿಟ್ಲರನ ವ್ಯಕ್ತಿತ್ವವನ್ನೂ, ಸಿದ್ಧಾಂತವನ್ನೂ ವಿಡಂಬನೆ ವ್ಯಂಗ್ಯದ ದಾಟಿಯಲ್ಲಿ ಲೇವಡಿ ಮಾಡುತ್ತಲೇ ಹೋಗುತ್ತಾನೆ. ಹಿಟ್ಲರನ ದೌರ್ಬಲ್ಯ, ಸ್ವಪ್ರತಿಷ್ಠೆಯ ಬಗೆಗಿನ ಚಿತ್ರಣವಾದರೂ ಅದು ಐತಿಹಾಸಿಕ ನಿರೂಪಣೆಯಾಗುವುದಿಲ್ಲ.

ಅಡಿನೊಯ್ಡ್ ವಿಶ್ವವನ್ನೇ ಗೆದ್ದವನಂತೆ ಗ್ಲೋಬ್ ಹಿಡಿದು ನರ್ತಿಸುವಾಗ ಬಲೂನ್ ಒಡೆದು ಹೋಗುವ ಮುಖ್ಯ ದೃಶ್ಯ ಇದು. ಗ್ಲೋಬ್ ಒಡೆಯುವುದು ಹಿಟ್ಲರ್‌ನ ಭ್ರಾಮಕ ಬದುಕಿನ ಅರ್ಥಪೂರ್ಣ ಸಂಕೇತವಾಗುತ್ತದೆ.

ಈ ಚಿತ್ರದಲ್ಲಿ ಮೊತ್ತಮೊದಲು ಮಾತನಾಡಿದ ಚಾಪ್ಲಿನ್ ಅತ್ಯಂತ ವಾಚಾಳಿಯಾಗಿದ್ದಾನೆ. ಮೂಕ ಅಭಿನಯದಂತೆ ವ್ಯಂಗ್ಯದ ನವಿರಿನ ಅತನ ಮಾತುಗಳು ಕೂಡಾ ಮನಸ್ಸನ್ನು ತಟ್ಟುತ್ತದೆ.

ತನ್ನನ್ನು ಅಡಿನೊಯ್ಡ್ ಎಂದು ತಪ್ಪಾಗಿ ತಿಳಿದು ಯುದ್ಧದ ಮುಂದಾಳತ್ವ ವಹಿಸುವಂತೆ ಮಾಡಿದಾಗ ಜನರನ್ನು ಉದ್ದೇಶಿಸಿ ಮಾತನಾಡುವ ಚಾಪ್ಲಿನ್ ತನ್ನ ಭಾಷಣದಲ್ಲಿ ತನ್ನ ಬದುಕಿನ ಸಿದ್ಧಾಂತವನ್ನು ಬಿಚ್ಚಿಡುತ್ತಾನೆ.

ಈ ಚಿತ್ರವೇನೂ ಚಾಪ್ಲಿನ್‌ನ ಅತ್ಯುತ್ತಮ ಕೊಡುಗೆ ಅಲ್ಲವೆನಿಸುತ್ತದೆ. 1947ರಲ್ಲಿ ಬಿಡುಗಡೆಯಾದ "ಮಾನ್‌ಸಿಯರ್ ವರ್ಡೋಕ್ಸ್" ಚಿತ್ರ ನೋಡಿದವರಿಗೆ.

ಬಂಡವಾಳಶಾಹಿ ವಿರುದ್ಧದ ತನ್ನ ನಿಲುವನ್ನು ಈ ಚಿತ್ರದಲ್ಲಿ ಸ್ಪಷ್ಟವಾಗಿ ಹೇಳಿದ ಚಾಪ್ಲಿನ್ ಮೊದಲಬಾರಿಗೆ ಗಂಭೀರ ವಸ್ತುವನ್ನು ತನ್ನ ಚಿತ್ರಕ್ಕೆ ಆರಿಸಿದ್ದ. ಅತನ ಖ್ಯಾತ 'ತಿರುಕ' ಈ ಚಿತ್ರದಲ್ಲಿ ಕಾಣುವುದಿಲ್ಲ. ಅದರ ಬದಲಿಗೆ, ಹೆಂಡತಿಯ ಹಂತಕ, ಸಂಪತ್ತಿನ ಬೆನ್ನು ಹತ್ತಿದ, ದುಷ್ಟನ ಪಾತ್ರವನ್ನು ಚಾಪ್ಲಿನ್ ತಂದಿದ್ದಾನೆ.

ಮರಣದಂಡನೆಗೊಳಗಾಗುವ ಕೆಲವು ಕ್ಷಣಗಳ ಮುಂಚೆ ಅತ ಹೇಳುತ್ತಾನೆ "ಒಳ್ಳೆಯದು ಮತ್ತು ಕೆಟ್ಟದು ಎರಡು ಅತಿರೇಕಕ್ಕೆ ಹೋದರೆ ವಿನಾಶ ತಪ್ಪಿದ್ದಲ್ಲ"

ನಗುನಗುತ್ತಾ ನೇಣಿಗೆ ಕೊರಳೊಡ್ಡುವ ವರ್ಡೋಕ್ಸ್, "ಎಲ್ಲಿಯವರೆಗೆ ಜನ ಗೌರವದಿಂದ ಸಾಯುವುದಿಲ್ಲವೋ ಅಲ್ಲಿಯವರೆಗೆ ಸ್ವಾತಂತ್ರ್ಯಕ್ಕೆ ಬೆಲೆ ಇಲ್ಲ" ಎನ್ನುವ "ದಿ ಗ್ರೇಟ್ ಡಿಕ್ಟೇಟರ್"ನ ಮಾತುಗಳನ್ನು ನೆನಪಿಗೆ ತರುತ್ತಾನೆ. ಕೊನೆಗೂ ಮೊದಲ ಪ್ರಶ್ನೆಗೆ ಉತ್ತರ ಸಿಗುವುದಿಲ್ಲ. ಚಾರ್ಲಿ ಚಾಪ್ಲಿನ್‌ನ ಅತ್ಯುತ್ತಮ ಚಿತ್ರ ಯಾವುದು?